# ಅಭಿಮಾನಿ ವೀರರು!

ರಾಜ್‌ಕುಮಾರ್ ತೆರೆಯ ಮೇಲಿನ ಪಾತ್ರವಾಗಿ ಹೇಳಿದ ಮಾತಿಗೆ ಬೆಲೆ ಕೊಟ್ಟು ತಮ್ಮ ಬದುಕನ್ನೇ ಬದಲಿಸಿಕೊಂಡ ಸಾಕಷ್ಟು ಅಭಿಮಾನಿಗಳು ಇದ್ದಾರೆ. ಅವರು ತಮ್ಮ ಅಭಿಮಾನಿಗಳನ್ನು 'ಅಭಿಮಾನಿ ದೇವರು' ಎಂದು ಕರೆದವರು ರಾಜ್‌ಕುಮಾರ್. ಅವರಿಗೆ ಜನರ ಅಭಿಮಾನ ಎಂಬುದು ತಮ್ಮನ್ನು ಇನ್ನಷ್ಟು ವಿನೀತರನ್ನಾಗಿಯೂ, ವಿನಯವಂತರನ್ನಾಗಿಯೂ ಮಾಡುವ ದೈವೀಭಾವವಾಗಿತ್ತು. ಆದರೆ ಇಂದಿನ ನಟರ ಪಾಲಿಗೆ ಅಭಿಮಾನಿಗಳು ದೇವರಲ್ಲ. ತಮ್ಮ ಪೀಠವನ್ನು ಕಟ್ಟಿಕೊಳ್ಳುವ ಇಟ್ಟಿಗೆಗಳು, ತಮ್ಮ ಕೋಟೆಗೆ ಯಾರೂ ಬರದ ಹಾಗೆ ತಡೆಯುವ ಬೇಲಿಗಂಬಗಳು. ತಮ್ಮ ವಿರುದ್ಧದ ಅಭಿಪ್ರಾಯಗಳನ್ನು ಹತ್ತಿಕ್ಕುವ ಆಯುಧಗಳು.

ಈ ಮಾತು ಇನ್ನಷ್ಟು ಸ್ಪಷ್ಟವಾಗಬೇಕಾದರೆ ಕಳೆದ ಕೆಲವು ದಿನಗಳಲ್ಲಿ ನಡೆದ ಎರಡು ಘಟನೆಗಳನ್ನು ನೆನಪಿಸಿಕೊಳ್ಳಬೇಕು. ಒಂದು ನಟ ಜಗ್ಗೇಶ್ ಅವರಿಗೆ ದರ್ಶನ್ ಅಭಿಮಾನಿಗಳು ಮುತ್ತಿಗೆ ಹಾಕಿದ ಘಟನೆ. ಇನ್ನೊಂದು ಸುದೀಪ್ ಅಭಿಮಾನಿಗಳು ಇತ್ತೀಚೆಗೆ ಅಹೋರಾತ್ರ ಎಂಬವರ ಮನೆಗೆ ನುಗ್ಗಿ ದಾಂಧಲೆ ಮಾಡಿದ ಘಟನೆ.



ಈ ಎರಡೂ ಘಟನೆಗಳಲ್ಲಿ ಎದ್ದು ಕಾಣುವುದು ಅಭಿಮಾನವಲ್ಲ. ಅದು ಅಂಧಾಭಿಮಾನದ ಪುಂಡಾಟಿಕೆ. ಹಾಗಾಗಿ ಅವರನ್ನು ಅಂಧಾಭಿಮಾನಿಗಳು ಅನ್ನುವುದಕ್ಕಿಂತ ಗೂಂಡಾಭಿಮಾನಿಗಳು ಅನ್ನುವುದೇ ಹೆಚ್ಚು ಸೂಕ್ತವೇನೋ. ಅಹೋರಾತ್ರ, ಸುದೀಪ್ ರಮ್ಮಿ ಜಾಹೀರಾತಿನಲ್ಲಿ ಕಾಣಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಅದೇ ಕಾರಣಕ್ಕೆ ಸುದೀಪ್ ಅಭಿಮಾನಿಗಳು ಸಿಟ್ಟಿಗೆದ್ದು ಕ್ಷಮೆಗೆ ಪಟ್ಟು ಹಿಡಿದು ಅಹೋರಾತ್ರ ಮನೆಗೆ ನುಗ್ಗಿದ್ದಾರೆ. ದರ್ಶನ್ ಬಗ್ಗೆ ಕೆಟ್ಟದಾಗಿ ಮಾತಾಡಿದ್ದಾರೆ ಅನ್ನುವ ಆರೋಪ ಒಡ್ಡಿ ಅವರ ಅಭಿಮಾನಿಗಳು ಜಗ್ಗೇಶ್ ಅವರಿಗೆ ಮುತ್ತಿಗೆ ಹಾಕಿದ್ದಾರೆ. ತಮ್ಮ ನೆಚ್ಚಿನ ನಟನ ವಿರುದ್ಧ ಯಾರಾದರೂ ಮಾತಾಡಿದರೆ, ಅಭಿಮಾನಿಗಳಿಗೆ ಬೇಸರವಾಗುವುದು ಸಹಜವೇ. ಆದರೆ ಅದನ್ನು ವ್ಯಕ್ತಪಡಿಸಲು ಅವರು ಆಯ್ದುಕೊಳ್ಳುತ್ತಿರುವ ಮಾರ್ಗ ಮಾತ್ರ ಆತಂಕ ಹುಟ್ಟಿಸುವಂಥದ್ದು. ವ್ಯವಸ್ಥೆಗೆ ವಿರುದ್ಧವಾದದ್ದು. ಇದು ಆಯಾ ನಟನಿಂದ ಅಭಿಮಾನಿಗಳು ಏನನ್ನು ಕಲಿತುಕೊಂಡಿದ್ದಾರೆ ಎಂಬುದನ್ನೂ ಸೂಚಿಸುತ್ತದೆ.

ಅಭಿಮಾನಿಗಳ ಕೋಟೆ ನಿರ್ಮಾಣಗೊಳ್ಳುವುದು, ಸಂಘ ಹುಟ್ಟಿಕೊಳ್ಳುವುದೆಲ್ಲವೂ ಈ ಸ್ಟಾರ್‌ಗಳ ಪ್ರಭಾವಲಯದ ಆಚೆ ನಡೆಯುವುದೆಲ್ಲ ಎಂಬುದು ಗಾಂಧಿನಗರವನ್ನು ಬಲ್ಲ ಎಲ್ಲರಿಗೂ ಗೊತ್ತಿರುವುದೇ ನಿಜವೇ. ಹಾಗಾಗಿ ಅಭಿಮಾನಿಗಳು ಮಾಡಿದ್ದಕ್ಕೆ ನಟನನ್ನು ಹೊಣೆ ಮಾಡುವುದು ಸರಿಯಲ್ಲ ಎಂಬುದು ತಾರ್ಕಿಕವಾಗಿಯಷ್ಟೇ ಸರಿ ಎನ್ನಬಹುದಾದ ಮಾತು. ಎಲ್ಲದರ ನಿಯಂತ್ರಣವೂ ಅವರ ಬಳಿಯೇ ಇರುವುದರಿಂದ ಇವರು ಮಾಡಿದ ಕಾರ್ಯಗಳಲ್ಲಿ ಅವರ ಜವಾಬ್ದಾರಿಯೂ ಇದ್ದೇ ಇರುತ್ತದೆ. ನಟನನ್ನು ಟೀಕಿಸುವವರು, ಅವನ ಸಾಮಾಜಿಕ ಜವಾಬ್ದಾರಿಯನ್ನು ಪ್ರಶ್ನಿಸುವುದು ತಪ್ಪು ಎಂದರೆ ಅದು ಆ ನಟನ ನೈತಿಕ ಅಧಃಪತನವನ್ನು ಸೂಚಿಸುತ್ತದೆ. ಇಂಥ ಘಟನೆಯಾದಾಗ ನಟರು ಹೇಗೆ ಸ್ಪಂದಿಸುತ್ತಾರೆ ಎಂಬುದೂ ಅಷ್ಟೇ ನಿಖರವಾದ ಸಂದೇಶವನ್ನು ಕೊಡುತ್ತದೆ. ಆದರೆ ಸದಾ ಚಕ್ರವರ್ತಿ ಕಿರೀಟವನ್ನು ತಲೆಯ ಮೇಲೇ ಇರಬೇಕು ಎಂದು ಬಯಸುವ ಬಣ್ಣದ ಲೋಕದ ಮಹಿಮರಿಗೆ ಇವೆಲ್ಲ ಅರ್ಥ ಆಗುತ್ತದೆಯೇ? ಅರ್ಥ ಆದರೂ ಆಗದ ಹಾಗೆ ನಟಿಸುವುದು ಅವರಿಗೇನು ಕಷ್ಟದ ವಿಷಯವೇ? ■



# ಓ ಮೈ ಲವ್

## ಶೂಟಿಂಗ್ ಜೋರು!

ಶಶಿಕುಮಾರ್ ಮಗ ಅಕ್ಷಿತ್ ಶಶಿಕುಮಾರ್ ಮತ್ತು ಹುಬ್ಬಳ್ಳಿ ಹುಡುಗಿ ಕೀರ್ತಿ ಕಲ್ಕೆರೆ ಜೊತೆಯಾಗಿ ನಟಿಸುತ್ತಿರುವ 'ಓ ಮೈ ಲವ್' ಸಿನಿಮಾ ಚಿತ್ರೀಕರಣ ಶೇ 40ರಷ್ಟು ಮುಗಿದಿದೆ.

ತಮ್ಮ ನಟನಾಪ್ರಯಾಣಕ್ಕೆ ಈ ಚಿತ್ರ ಅದ್ದೂರಿ ಓಪನಿಂಗ್ ಕೊಡುತ್ತದೆ ಎಂಬ ಹುಮ್ಮಸ್ಸಿನಲ್ಲಿ ಅಕ್ಷಿತ್ ಶಶಿಕುಮಾರ್ ಇದ್ದಾರೆ.

ಜಿಸಿಬಿ ಪ್ರೊಡಕ್ಷನ್ ಲಾಂಛನದಲ್ಲಿ ಜಿ. ರಾಮಾಂಜಿನಿ ಅವರು ಬಂಡವಾಳ ಹಾಕಿರುವುದಲ್ಲದೆ ಕಥೆಯನ್ನೂ ಬರೆದಿದ್ದಾರೆ. 'ಈ ಚಿತ್ರದ ನಿರೂಪಣೆಯಲ್ಲಿಯೇ ಹೊಸತನವಿದೆ.



ಒಂದು ಪ್ರೇಮಕಥೆಯನ್ನು ಅತ್ಯಂತ ಭಿನ್ನವಾಗಿ ಮತ್ತು ಸುಂದರವಾಗಿ ಕಟ್ಟಿಕೊಡಲು ಯತ್ನಿಸಿದ್ದೇವೆ' ಎಂಬುದು ನಿರ್ದೇಶಕ ಸ್ಮೈಲ್ ಶ್ರೀನು ಅವರ ಮಾತು.

ಮಗಧೀರ ಚಿತ್ರದಲ್ಲಿ ನಟಿಸಿದ್ದ ದೇವ್‌ಗಿಲ್ ಈ ಚಿತ್ರದಲ್ಲಿ ಖಳನಾಗಿ ಅಬ್ಬರಿಸಿರುವುದು ಈ ಚಿತ್ರದ ಬಗ್ಗೆ ಕುತೂಹಲವನ್ನು ಹೆಚ್ಚಿಸಿದೆ. ಇತ್ತೀಚೆಗೆ ಬೆಂಗಳೂರಿನ ಮಿನರ್ವ ಮಿಲ್ ಆವರಣದಲ್ಲಿ ಸೆಟ್ ನಿರ್ಮಿಸಿ ರೋಚಕ ಸಾಹಸದೃಶ್ಯಗಳನ್ನು ಸೆರೆಹಿಡಿಯಲಾಗಿದೆ.

ಎಸ್. ನಾರಾಯಣ್, ಸಂಗೀತ, ಸುಂದರಶ್ರೀ, ಭಾಗ್ಯಶ್ರೀ, ಪೃಥ್ವಿರಾಜ್, ದೀಪಿಕಾ ಆರಾಧ್ಯ, ಸಾಧುಕೋಕಿಲ, ಪವಿತ್ರಾ ಲೋಕೇಶ್ ಈ ಚಿತ್ರದ ತಾರಾಗಣದಲ್ಲಿದ್ದಾರೆ. ಚರಣ್ ಅರ್ಜುನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ■